Available online at www.elixirpublishers.com (Elixir International Journal)

Language and Testing

Elixir Lang. & Testing 96 (2016) 41425-41430

ISSN: 2229-712X

# Language Usage in Print Media
# "ಮುದ್ರಣ ಮಾಧ್ಯಮದಲ್ಲಿ ಭಾಷೆಯ ಪಾತ್ರ"

Bullannavar Basusab ಬುಳ್ಳಣ್ಣವರ ಬಾಸೂಸಾಬ

ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ Govt First Grade College Gadag, Karnataka

**ARTICLE INFO**

**Article history:**
Received:11 May 2016;
Received in revised form:
15 June 2016;
Accepted: 12 July 2016;

**Keywords**
Print – ಮುದ್ರಣ
Voice – ಧ್ವನಿ
Language – ಭಾಷೆ
Sound – ಶಬ್ದ
Script - ಲಿಪಿ

**ABSTRACT**

"Language opened the door of civilization". Along with it, it became a powerful tool to fight the darkness of human beings. Voice form is infinite script, voice, hand gestures, verbal signs expressing their feelings through hand gestures, verbal signs, gradually acquiring phonetic form and thus creating spoken languages, discovering 'script' and finding 'script' according to human's intellectual development, thought, situations, and intensive research values. Language led to growth. Over time, systematic scripts emerged for a language that was spoken only orally. In ancient times, palmistry, epigraphy, writing in files, and writing on paper took a great place.

"ಭಾಷೆಯು ನಾಗರಿಕತೆಯ ಬಾಗಿಲು ತೆರೆಯಿತು". ಅದರೊಂದಿಗೆ, ಇದು ಮಾನವನ ಕತ್ತಲೆಯ ವಿರುದ್ಧ ಹೋರಾಡುವ ಪ್ರಬಲ ಸಾಧನವಾಯಿತು. ಧ್ವನಿ ರೂಪವು ಅನಂತ ಲಿಪಿ, ಧ್ವನಿ, ಕೈ ಸನ್ನೆಗಳು, ಮೌಖಿಕ ಚಿಹ್ನೆಗಳು ಕೈ ಸನ್ನೆಗಳು, ಮೌಖಿಕ ಚಿಹ್ನೆಗಳ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತದೆ, ಕ್ರಮೇಣ ಫೋನೆಟಿಕ್ ರೂಪವನ್ನು ಪಡೆದುಕೊಳ್ಳುತ್ತದೆ ಮತ್ತು ಹೀಗೆ ಮಾತನಾಡುವ ಭಾಷೆಗಳನ್ನು ರಚಿಸುತ್ತದೆ, 'ಲಿಪಿ' ಅನ್ನು ಕಂಡುಹಿಡಿಯುವುದು ಮತ್ತು ಮಾನವನ ಬೌದ್ಧಿಕ ಬೆಳವಣಿಗೆಗೆ ಅನುಗುಣವಾಗಿ 'ಸ್ಕ್ರಿಪ್ಟ್' ಅನ್ನು ಕಂಡುಹಿಡಿಯುವುದು, ಚಿಂತನೆ, ಸನ್ನಿವೇಶಗಳು ಮತ್ತು ತೀವ್ರವಾದ ಸಂಶೋಧನಾ ಮೌಲ್ಯಗಳು. ಭಾಷೆ ಬೆಳವಣಿಗೆಗೆ ಕಾರಣವಾಯಿತು. ಕಾಲಾನಂತರದಲ್ಲಿ, ಕೇವಲ ಮೌಖಿಕವಾಗಿ ಮಾತನಾಡುವ ಭಾಷೆಗೆ ವ್ಯವಸ್ಥಿತ ಲಿಪಿಗಳು ಹೊರಹೊಮ್ಮಿದವು. ಪ್ರಾಚೀನ ಕಾಲದಲ್ಲಿ, ಹಸ್ತಸಾಮುದ್ರಿಕ ಶಾಸ್ತ್ರ, ಶಿಲಾಶಾಸನ, ಕಡತಗಳಲ್ಲಿ ಬರೆಯುವುದು ಮತ್ತು ಕಾಗದದ ಮೇಲೆ ಬರೆಯುವುದು ಉತ್ತಮ ಸ್ಥಾನವನ್ನು ಪಡೆದಿದೆ.

**© 2016 Elixir All rights reserved.**

"

**ಬ1.ಪೀಠಿಕೆ:**

"ಮೂಲತ: ಮಾನವನ ಹುಟ್ಟು ಮಂಗನ ರೂಪದಿಂದ ವಿಕಾಸಗೊಂಡಿದೆ ಎಂಬುದು ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಸಿದ್ಧಾಂತವು ಆಗಿದೆ. ಬೆನ್ನು ಮೂಳೆ ಬಾಗಿಸಿಕೊಂಡು ಗೋರಿಲ್ಲಾ, ಚಿಂಪಾಂಜಿಗಳಂತೆ ತನ್ನ ವರ್ತನೆಗಳನ್ನು ಬೆಳೆಸಿಕೊಂಡಿದ್ದ ಮಾನವ ಹಂತ-ಹಂತವಾಗಿ ಸೆಟೆದು ನಿಲ್ಲುವುದನ್ನು ಕಲಿತುಕೊಳ್ಳುತ್ತ, ನೇರವಾಗಿ ತನ್ನಷ್ಟಕ್ಕೇ ತಾನೇ ಸ್ವತಂತ್ರನಾಗಿ ನೆಟ್ಟಗೆ ನಿಲ್ಲುವ ಪ್ರವೃತ್ತಿ ಬೆಳೆಸಿಕೊಂಡ ನಂತರ ಆವನ ವ್ಯಕ್ತಿಗತ ಮಾನವನ ಸಂಶೋಧನಾ ಮೌಲ್ಯಗಳ ತೀವ್ರಗತಿಯ ಬೆಳವಣಿಗೆ ಮಾನವನ ಮೂಲ ಸೆಲೆಯಾಗಿ ರೂಪಗೊಂಡು ಕ್ರಮೇಣ ಭಾಷೆ, ಸಂಸ್ಕೃತಿ, ಉಡುಗೆ-ತೊಡುಗೆ, ನಡೆ-ನುಡಿಗಳಲ್ಲಿ ಮಹತ್ತರ ಬದಲಾವಣೆಗಳು ಮಾನವನ ಬೌದ್ಧಿಕ ವಿಕಾಸ, ವಿಚಾರ, ಸನ್ನಿವೇಶಗಳಿಗನುಗುಣವಾಗಿ ಮಾರ್ಪಾಟಾಗಿರುವುದನ್ನು ನಾವು ಕಾಣುತ್ತೇವೆ.1

**2.ವಿಷಯ:**

ಧ್ವನಿರೂಪ ಅನಂತ ಲಿಪಿರೂಪ, ಚಾಕ್ಷುಕರೂಪದ ಧ್ವನಿ, ಕೈಸನ್ನೆ, ಬಾಯಿಸಂಜ್ಞೆಗಳ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಕ್ರಮೇಣ ಧ್ವನಿಮಾರೂಪವನ್ನು ಪಡೆದುಕೊಂಡು ಸ್ಪಷ್ಟವಾದ ಮಾತಿಗಳಿಗೆಡೆಗೆ ಮುನ್ನುಗ್ಗುತ್ತಾ ಹೆಸರುಗಳನ್ನು ಭಾವನೆಗಳನ್ನು ಮೊದ ಮೊದಲು ನೇರವಾಗಿ ಬರೆಯಲಾಗಲಿಲ್ಲ. ಸಂಕೇತಗಳನ್ನು ಬರೆಯೋಣ ಎಂಬ ವಿಚಾರ ಸಮಗ್ರ ಜನರಲ್ಲಿ ಬೇರೂರಿ ಆಯಾ ಜಾತಿಯ ಕುಲಕಸಬುಗಳ ಜನರು ತಮ್ಮ ಪ್ರತ್ಯೇಕ ಭಾಷೆಗಳಿಗೋಸ್ಕರ ಹಲವಾರು ಭಾಷೆಗಳನ್ನು ಸೃಷ್ಟಿಸುತ್ತ ತನ್ಮೂಲಕ ಮಾತನಾಡುತ್ತ ಅವುಗಳಿಗೆ ಸರಿಹೊಂದುವ ಹಾಗೆ 'ಲಿಪಿ' ಕಂಡುಹಿಡಿದು ಮಾನವರಲ್ಲಿ ಹುಟ್ಟು ಮತ್ತು ಜಾತಿಯ ಬದಲಾವಣೆ ಆಗುವುದರ ಜೊತೆಗೆ ಕ್ರಮೇಣ ಭಾಷೆಗಳ ವರ್ಗೀಕರಣತೆ ಹೆಚ್ಚಾಗತೊಡಗಿತು.

**Tele: 8861814506**
**E-mail addresses:bullannavarbasusab@gmail.com**

**© 2016 Elixir All rights reserved**

## 1. Introduction

"Original: It is a theoretical and scientific theory that the origin of man evolved from the form of ape. Man, who developed his behavior like gorillas and chimpanzees by bending his back, gradually learned to stand upright, and after developing the tendency to stand up directly on his own, the rapid development of his individual human research values is the origin of man. Formed as a cell, we see great changes in language, culture, dress and mannerisms as per human intellectual development, ideas and situations.1

**2. Subject**

Phonetic infinite script, expressing one's emotions through voice, hand gestures, verbal signs, gradually acquiring phonetic form and progressing to clear words, names, feelings could not be written directly at first. The idea of writing symbols took root in the whole people, the people of the clans of each caste created several languages for their separate languages and thus spoke and found a 'script' to suit them, along with the birth and caste change in humans, the classification of languages gradually began to increase. However, no matter how many languages there are many differences in their phonemes, it cannot be forgotten that the place of origin of the port language is the same.

ಆದರೂ ಎಷ್ಟೇ ಭಾಷೆಗಳಿದ್ದರೂ ಅವುಗಳ ಧ್ವನಿರೂಪದಲ್ಲಿ ಅನೇಕ ವ್ಯತ್ಯಾಸಗಳು ಕಂಡು ಬಂದರು ಭಾಷೆಯ ಉಗಮ ಸ್ಥಾನ ಒಂದೇ ಆಗಿದೆ ಎಂಬುದನ್ನು ಮರೆಯುವಂತಿಲ್ಲ.

"ಭಾಷೆ ನಾಗರಿಕತೆಯ ಬಾಗಿಲ ಬೀಗವನ್ನು ತೆರೆಯಿತು. ಅದರ ಜೊತೆಗೆ ಮಾನವನ ಅಂಧಕಾರವನ್ನು ಹೊಡೆದೋಡಿಸುವಲ್ಲಿ ಪ್ರಭಲವಾದ ಸಾಧನವಾಯಿತು. ಜನರಲ್ಲಿ ಈ ಭಾಷೆಯ ಪೈಪೋಟಿ ಪ್ರಾರಂಭವಾಗಿ ಅವರು ಭಾಷೆಗಳ ವರ್ಣಗಳನ್ನು ಇಷ್ಟಬಂದಂತೆ, ಸರಳತೆಗೋಸ್ಕರ, ನಿರ್ದಿಷ್ಠ ಅಕ್ಷರಗಳನ್ನು ಮಾಡಿಕೊಂಡರು.2 ಆದರೆ ಇವುಗಳ ವಿಭಿನ್ನತೆಯ ವರ್ಗೀಕರಣತೆಯಿಂದ ಅಖಂಡವಾದ ಜಗತ್ತನ್ನು ತುಂಡು ತುಂಡು ಮಾಡಿಸುವಲ್ಲಿ ಕಾರಣೀಭೂತವಾಗಿಯು ಪರಿಣಮಿಸಿದೆ ಎಂದು ಹೇಳಬಹುದು. ಹೀಗೆ ಭಾಷೆ ಮನುಷ್ಯನ ಮನಸ್ಸನ್ನು ಪ್ರಕಾಶಪಡಿಸುವ ಸಾಧನಗಳಲ್ಲಿ ಒಂದು ಮಾತ್ರವಲ್ಲ. ಆ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದುದು. ಇದು ಮಾನವನ ಜೀವನಾಡಿಯಿದ್ದಂತೆ; ಇದಿಲ್ಲದೇ ಹೋದರೆ ಅವನು ನಿರ್ಜೀವ ವಸ್ತುವಿದ್ದಂತೆ ಎಂಬ ಮನೋಭಾವನೆ ಎಲ್ಲೆಡೆ ಕಂಡುಬರುತ್ತದೆ. ಅದಲ್ಲದೇ ತನ್ನ ವಿಚಾರಗಳನ್ನು ಮತ್ತೊಬ್ಬನಿಗೆ ತಿಳಿಸಲು ಮತ್ತು ಮತ್ತೊಬ್ಬನ ಮನಸ್ಸಿನಲ್ಲಿರುವ ಭಾವನೆಗಳನ್ನು ತಾನು ತಿಳಿದುಕೊಳ್ಳಲು ಭಾಷೆಯ ಮಾಧ್ಯಮವು ಮುಖ್ಯವಾದ ಸಾಧನವಾಗಿದೆ. ಜಗತ್ತಿನ ಹೆಚ್ಚಿನ ವ್ಯವಹಾರ, ಮಾತುಕತೆಗಳು ಬರೆಯುವುದು ಅಥವಾ ಓದುವುದು ಇವೆಲ್ಲವೂ ಭಾಷೆಯ ಮೂಲಕವೇ ಆಗಬೇಕಾದ ಪ್ರಕಿಯೆಗಳಾಗಿವೆ. ಜಗತ್ತಿನ ಪ್ರತಿಯೊಂದು ಸಮಸ್ತ ವಿಚಾರ–ವಿನಿಮಯ ಹಾಗೂ ಸಮಸ್ತ ವ್ಯವಹಾರಕ್ಕೂ ಭಾಷೆಯೇ ಮೂಲವೆನ್ನವುದು ನಿರ್ವಿವಾದವಾದುದು.

ಭಾಷೆ ಲಿಖಿತರೂಪದಲ್ಲಿ ಏಕೆ ಬಂದಿತು? ಅವುಗಳ ಅವಶ್ಯಕತೆ ಏನಿತ್ತು? ಎಂಬ ಆಲೋಚನೆಮಯವಾದುದು. ಎದುರಿಗಿರುವ ಮನುಷ್ಯನಿಗೆ ಪ್ರತ್ಯಕ್ಷವಾಗಿ ಮಾತಿನ ಮೂಲಕವೇ ನಾವು ನಮ್ಮ ಮನಸ್ಸಿನ ಅಭಿಪ್ರಾಯಗಳನ್ನು ತಿಳಿಸಬಹುದು. ಇಲ್ಲಿ ಭಾಷೆಯೂ ಪರಸ್ಪರ ಮುಖಾಮುಖಿಯಾಗಿಯೇ ನಡೆಯುತ್ತದೆ. ಆದರೆ ದೂರದಲ್ಲಿರುವ ಮನುಷ್ಯರಿಗೆ ತಿಳಿಸಬೇಕಾದಾಗ ಅಥವಾ ಮುಂದಿನ ಪೀಳಿಗೆಗೆ ಅವಶ್ಯಕವಾದ ವಿಚಾರಗಳನ್ನು ಸಂಗ್ರಹಿಸಿ ಇಡಬೇಕಾದಾಗ ಲಿಖಿತ ಭಾಷೆಯ ಅವಶ್ಯಕತೆಯಿದೆ. ಈಗಿನ ಕಾಲದಲ್ಲಿ ದೂರವಾಣಿಗಳ ಮೂಲಕ ಹಾಗೂ ಗಣಕಯಂತ್ರದ ಅಂತರ್ಜಾಲದ ಮೂಲಕ ದೂರದಲ್ಲಿರುವವರೊಡನೆ ಮಾತನಾಡಬಹುದು. ಟೇಪರಿಕಾರ್ಡರ್ ಮೂಲಕ ಮಾತುಗಳನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೂ ಸಂಗ್ರಹಿಸಬಹುದು. "ಈ ಹಿಂದೆ ಲಿಪಿಗಳು ಪ್ರಾರಂಭವಾದಾಗ ಈ ಯಾವ ವ್ಯವಸ್ಥೆಯೂ ಇರಲಿಲ್ಲವಷ್ಟೇ, ಆದುದರಿಂದ ಭಾಷೆಯು ಲಿಪಿಯ ಮೂಲಕ ಪ್ರಚಾರಕ್ಕೆ ಬಂದಿತ್ತು. ಈ ಲಿಖಿತ ಭಾಷೆಯಲ್ಲಿ ಪ್ರತಿಯೊಂದು ಶಬ್ದಕ್ಕೂ ಒಂದೊಂದು ಮೂಲ ಧ್ವನಿಯನ್ನು ಗುರುತಿಸಲಾಗಿದೆ ಮತ್ತು ಅವಕ್ಕೆ ಒಂದೊಂದು ಚಿಹ್ನೆಯನ್ನು ಗುರುತಿಸಲಾಗಿದೆ. ಅವನ್ನೆ 'ವರ್ಣ'ಗಳೆಂದು ಹೇಳುತ್ತಾರೆ. ಮೂಲಧ್ವನಿಯು ಕಿವಿಗಳಿಂದ ಕೇಳತಕ್ಕದ್ದಾಗಿದೆ. ವರ್ಣಗಳು ಕಣ್ಣಿನಿಂದ ನೋಡತಕ್ಕದ್ದಾಗಿವೆ. ಈ ವರ್ಣವೇ ಧ್ವನಿಯ ಪ್ರತಿನಿಧಿಯಾಗಿರುತ್ತದೆ.3

ಹೀಗೆ ಕೇವಲ ಬಾಯಿಮಾತಿನಿಂದ ಹೇಳುತ್ತಿದ್ದ ಭಾಷೆಗೆ ಕಾಲಕ್ರಮದಲ್ಲಿ ವ್ಯವಸ್ಥಿತವಾದ ಲಿಪಿಗಳ ಉದ್ಭವಾಯಿತು. ಪ್ರಾಚೀನ ಕಾಲದಲ್ಲಿ ತಾಳೆಗರಿ, ಶಿಲಾಶಾಸನ, ಕಡತಗಳಲ್ಲಿ ಬರವಣಿಗೆ ಮೂಡಿ, ಬರಬರುತ್ತಾ ಕಾಗದದ ಮೇಲೆ ಬರೆಯುವುದರ ಮೂಲಕ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡು, ಆಧುನಿಕ ವ್ಯವಸ್ಥೆಯಲ್ಲಿ ಮುದ್ರಣದ ಯಂತ್ರಗಳ ಅವಿಷ್ಕಾರವಾಗಿ ಗಣಕಯಂತ್ರ, ಟೆಲಿಪ್ರಿಂಟರ್ ಮೂಲಕವಾಗಿ ಈ ಭಾಷೆಯ ಮುದ್ರಣ ಮಾಧ್ಯಮದಲ್ಲಿ ಉಪಯೋಗವಾಗುವುದರ ಜೊತೆಗೆ ಮುದ್ರಣ ಮಾಧ್ಯಮಕ್ಕೆ ಭಾಷೆಯ ಹಾಗೂ ಲಿಪಿಯ ಅವಿಷ್ಕಾರ ತುಂಬಾ ಸಹಾಯಕವಾಗಿ, ಹೆಚ್ಚಿನ ಪ್ರಸಾರ ಹಾಗೂ ಪ್ರಚಾರತೆಯನ್ನು ಬಿತ್ತಿಸುವ ಪ್ರಬಲ ಮಾಧ್ಯಮಾಗಿ ಹೊರಹೊಮ್ಮಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಒಟ್ಟಿನಲ್ಲಿ ಲಿಪಿಗಳ ವ್ಯವಸ್ಥೆಯಾದ ನಂತರ ಮುದ್ರಣದ ಸದ್ಭಳಕೆಯಾಗುತ್ತಿರುವುದರಿಂದ ಭಾಷೆಗೆ ಒಂದು ನಿರ್ಧಾರಿತ ಸ್ವರೂಪವು ಒದಗಿ ಶಬ್ದಶಾಸ್ತ್ರದ ಜನನಕ್ಕೆ ನಾಂದಿಯಾಯಿತೆಂದು ಹೇಳಬಹುದು. ಪ್ರತಿಯೊಂದು ಭಾಷೆಯನ್ನು ಯಾವ ಲಿಪಿಯಲ್ಲಿ ಬರೆದರೇನು? ಮುದ್ರಣ ಮಾಧ್ಯಮಕ್ಕೆ ಅಳವಡಿಸಿಕೊಂಡರೂ ಅವುಗಳ ಅಕ್ಷರಗಳ ರೂಪದಲ್ಲಿ ಬದಲಾವಣೆ ಆಗಬಹುದೇ ಹೊರತು, ಭಾಷೆ ಮಾತ್ರ ಒಂದೇ.

However, no matter how many languages there are many differences in their phonemes, it cannot be forgotten that the place of origin of the port language is the same.

"Language opened the door of civilization. It also became a powerful tool to fight the darkness of human beings. The language competition started among the people and they liked the colors of languages, for simplicity, they made specific letters. 2 But by classifying these differences, it can be said that language has become the reason for breaking the intact world into pieces. Thus language has become the mind of man. One of the most important of those tools is illumination. It is like a human lifeline; Without this, there is a feeling everywhere that he is an inanimate object. Apart from that, the medium of language is an important tool to convey one's ideas to another and to know the feelings in another's mind. Much of the world's business, negotiation, writing or reading is all done through language. It is indisputable that language is the basis of every exchange of ideas and every business in the world.

Why did language come into written form? What was their need? Thoughtful. We can express our thoughts directly through speech to the person in front of us. Here the language also happens face to face. But there is a need for written language when we need to communicate to people at a distance or when we need to collect and store important ideas for future generations. Nowadays one can talk to people at a distance through telephones and computer internet. Words can be collected through tape recorder and stored for future generations. "Earlier when scripts started there was no such system, so the language was propagated through script. In this written language each word has a root sound and a symbol for it. They are called 'Varnas'. Will be representative.3

Thus a systematic script emerged over time for a language that was spoken only orally. In ancient times, palmistry, epigraphy, writing in files, and writing on paper took a great place, in the modern system, with the invention of printing machines, computer, teleprinter, the use of this language in print media, and the invention of language and script for print media is very helpful, as a powerful medium to sow more circulation and publicity. What emerges is evident. Generally speaking, the introduction of printing after the system of scripts gave a definite form to the language and heralded the birth of vocabulary. In which script is each language written? The language is the same, except that the form of their characters may change when adapted to print media.

Thus we use language for many purposes. It is part of our experience to use language for dozens of daily transactions, business transactions, deliberation, information creation and many other purposes. Written language like colloquial language comes in handy in such usages. These usages sometimes end up in a couple of sentences and sometimes they are long sentences. A conversation to get a ticket on a bus is one example, while talking to our dearest to correspondent and thousands of pages of commentary on a philosophical treatise is another.

ಹೀಗೆ ಭಾಷೆಯನ್ನು ನಾವು ಹಲವು ಉದ್ದೇಶಗಳಿಗಾಗಿ ಬಳಸುತ್ತೇವೆ. ದಿನನಿತ್ಯದ ಹತ್ತಾರು ವ್ಯವಹಾರಗಳಿಗೆ, ವ್ಯಾಪಾರ ವ್ಯವಹಾರಗಳಿಗೆ, ವಿಚಾರಮಂಡನೆಗೆ, ಮಾಹಿತಿ ರಚನೆಗೆ ಹೀಗೆ ಅನೇಕ ಉದ್ದೇಶಗಳಿಗಾಗಿ ಭಾಷೆಯನ್ನು ಬಳಸುವುದು ನಮ್ಮ ಅನುಭವದ ಭಾಗವೇ ಆಗಿದೆ. ಇಂಥ ಬಳಕೆಗಳಲ್ಲಿ ಆಡುಮಾತಿನಂತೆ ಲಿಖಿತ ಭಾಷೆಯು ಉಪಯೋಗಕ್ಕೆ ಬರುವುದು. ಈ ಬಳಕೆಗಳು ಕೆಲವೊಮ್ಮೆ ಒಂದೆರಡು ವಾಕ್ಯಗಳಲ್ಲಿ ಮುಗಿದರೆ ಮತ್ತೆ ಕೆಲವು ಕಡೆ ಬಹುದೀರ್ಘ ಸಂಕಥನಗಳಾಗಿರುತ್ತೆ. ಬಸ್‌ನಲ್ಲಿ ಟಿಕೆಟ್ ಪಡೆಯಲು ನಡೆಸುವ ಸಂಭಾಷಣೆ ಒಂದು ಮಾದರಿಯದಾದರೆ ನಮ್ಮ ಆತ್ಮೀಯರೊಡನೆ ಸಂಬಂಧಿಕರೊಡನೆ ಮಾತನಾಡುವುದು ಹಾಗೂ ತಾತ್ವಿಕ ಗ್ರಂಥವೊಂದಕ್ಕೆ ಬರೆದ ಸಾವಿರಾರು ಪುಟಗಳ ವ್ಯಾಖ್ಯಾನ ಮತ್ತೊಂದು ಮಾದರಿ, "ಕಾಳಗದಲ್ಲಿ ಮಡಿದ ವೀರರಿಗೆ ಸತಿಹೋದ ಹೆಂಗಸರು ಇವರ ನೆನಪಿನಲ್ಲಿ ಶಾಸನಗಳನ್ನು ಬರೆಸುವ ಪದ್ಧತಿ ಪ್ರಾಚೀನ ಕಾಲದಲ್ಲಿತ್ತು. ದಾನಶಾಸನಗಳು ಅಸಂಖ್ಯವಾಗಿವೆ. ಇತಿಹಾಸಕಾರರು ಸಮಾಜಶಾಸ್ತ್ರಜ್ಞರು ತಮ್ಮ ಅಧ್ಯಯನಗಳಲ್ಲಿ ಈ ಲಿಖಿತರೂಪದ ಶಾಸನಗಳನ್ನು ಆಕರಗಳನ್ನಾಗಿ ಬಳಸುತ್ತಾರೆ. ಭಾಷೆಶಾಸ್ತ್ರಜ್ಞರು ವಿವಿಧ ಕಾಲಮಾನದ ಭಾಷಾ ರೂಪಗಳ ಅಧ್ಯಯನದಲ್ಲಿ ಶಾಸನಗಳ ಪಾಠವನ್ನು ಗಮನಿಸುತ್ತಾರೆ. ಇಂತಹ ಸಂದರ್ಭದಲ್ಲಿ ಮುದ್ರಿತ ರೂಪದಲ್ಲಿರುವ ಈ ಭಾಷೆ ಶಾಶ್ವತ ಹಾಗೂ ಮಹತ್ವವನ್ನು ಪಡೆದುಕೊಳ್ಳುತ್ತದೆ.4 ಮುದ್ರಣ ಮಾಧ್ಯಮದಲ್ಲಿ ಭಾಷೆಯನ್ನು ಬಳಸಬೇಕಾದಾಗ ಕೆಲವೊಂದು ಅಗತ್ಯಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

**ವಿಷಯಾಧಾರಿತ ಭಾಷಾ ಬಳಕೆ:**

ನಾವು ಯಾವ ವಿಷಯವನ್ನು ಕುರಿತು ಹೇಳಬೇಕೋ ಆ ವಿಷಯದ ಬಗ್ಗೆ ಪರಿಪೂರ್ಣವಾದ ಜ್ಞಾನ ಅಗತ್ಯ. ಅಲ್ಲಿ ವಿಷಯಕ್ಕೆ ಸಂಬಂಧಪಟ್ಟಂತಹ ಭಾಷೆಯನ್ನೇ ನಾವು ಬಳಸಬೇಕಾಗುತ್ತದೆ. ವಿದ್ಯಾರ್ಹತೆಯ ಆಧಾರದ ಮೇಲೆ ಹಾಗೂ ಸಮಾಜದ ಸಾಮಾನ್ಯ ಜನರ ಕುರಿತು ಮಾತನಾಡುವಾಗ ಮುದ್ರಣ ಮಾಧ್ಯಮಕ್ಕೆ ಅನುಗುಣವಾಗಿ ಆಯಾ ತೆರನಾದ ಅವರಿಗೆ ಅರ್ಥವಾಗುವಂತಹ ಅದಲ್ಲದೆ ಸ್ಪಷ್ಟವಾಗಿ ಅವರ ಮನಮುಟ್ಟುವಂತೆ ನಮ್ಮ ಶೈಲಿ ಹಾಗೂ ವಿಷಯವನ್ನು ಪ್ರಚುರಪಡಿಸಬೇಕಾದುದು ತುಂಬಾ ಅವಶ್ಯಕ. ಅನಕ್ಷರಸ್ಥರೊಡನೆ ಮಾತನಾಡುವ ಶೈಲಿ ಹಾಗೂ ಅಕ್ಷರಸ್ಥರೊಡನೆ ವ್ಯವಹರಿಸುವ ಭಾಷಾ ಶೈಲಿಗೂ ನಾವು ಭಿನ್ನತೆಯನ್ನು ಕಾಣುತ್ತೇವೆ. ಮುದ್ರಣ ಮಾಧ್ಯಮದಲ್ಲಿ ಬಳಸಲ್ಪಡುವ ಭಾಷೆ ನಮ್ಮ ಮುಖ್ಯ ಗುರಿ. ಉದ್ದೇಶಕ್ಕೆ ಪೂರಕವಾಗಿರಬೇಕು. ಆಯಾ ಜನಾಂಗೀಯ ಪ್ರಾದೇಶಿಕ, ಶೈಕ್ಷಣಿಕ ವಿಸ್ತರ, ಭೌಗೋಳಿಕ ಪ್ರದೇಶಕ್ಕನುಗುಣವಾಗಿ ಭಾಷೆಯನ್ನು ಬಳಸಿದಾಗ ಮಾತ್ರ ಉದ್ದೇಶದ ಸಫಲತೆಯಾಗುತ್ತೆ.

ಭಾಷೆಯು ಲೇಖನ ಪ್ರತಿನಿಧಿಯಾಗಿರಬೇಕೋ ಹೊರತು ಲೇಖಕ ಆದರ ಪ್ರತಿನಿಧಿಯಾಗಿರಬಾರದು. ಸ್ವತ: ಅವನೇ ಹೇಳುತ್ತಿರುವನೇನೋ ಎಂಬಂತೆ ಭಾಸವಾಗುವಷ್ಟರ ಮಟ್ಟಿಗೆ ಅದು ತನ್ನ ಕ್ರಿಯಾಶೀಲತೆಯನ್ನು, ಅರ್ಥವಂತಿಗೆ, ಸ್ಪಷ್ಟತೆ ಶಬ್ದಗಳ ವಾಕ್ಯ ರಚನಾತ್ಮಕ ಕೌಶಲ್ಯವನ್ನು ಒಡಮೂಡಿಸಿಕೊಂಡು ತನ್ನದೇ ಆದ ಮಹತ್ವವನ್ನು ಬಿಂಬಿಸುವ ಪ್ರಭಾವವನ್ನು ಹೊಂದಿರಬೇಕಾದುದು ಮುದ್ರಣ ಮಾಧ್ಯಮದಲ್ಲಿ ಭಾಷೆಗೆ ಇನ್ನು ಗಟ್ಟಿತನವನ್ನು ನೀಡುವಲ್ಲಿ ಕಾರಣವಾಗುತ್ತದೆ ಎಂದು ಹೇಳಬಹುದು. ಯಾವ ವಿಷಯವನ್ನು ಕುರಿತು ಹೇಳಬೇಕಾಗಿದೆಯೋ ಅದೇ ವಿಷಯಕ್ಕೆ ಸಂಬಂಧಪಟ್ಟ ಭಾಷಾ ಬಳಕೆ ಈ ಮುದ್ರಣ ಮಾಧ್ಯಮದಲ್ಲಿ ಕಂಡುಬರುವ ಮಹತ್ವದ ಅಂಶ. ಉದಾ: ಜಾನಪದ ವಿಷಯ ಕುರಿತು ಹೇಳುವಾಗ ಜನಪದೀಯವಾದ ಭಾಷಾ ಶೈಲಿಯನ್ನೇ ಬಳಸಬೇಕು. ಅದಲ್ಲದೆ ನಮ್ಮ ಭಾಷೆ ಗುರಿ ಸಾಧನೆಗೆ ಕೆಲವೊಂದು ಸಮಯದಲ್ಲಿ ಅದರ ರೂಪದಲ್ಲೇ ಪ್ರಚುರಪಡಿಸಬೇಕಾಗುತ್ತದೆ.

ಒಬ್ಬ ಮಹಾನ್ ವ್ಯಕ್ತಿಯ ಹೇಳಿಕೆ, ವ್ಯಾಖ್ಯಾನ, ವಿಧಾನಮಂಡಲದ ಭಾಷಣ ಹೇಳಿಕೆ ಆಯಾ ರಾಜಕಾರಣಿ, ವ್ಯಕ್ತಿಯ ಭಾಷಾ ಶೈಲಿಯನ್ನು ಹೇಳಿದ್ದನ್ನು ಹೇಳಿದ ಹಾಗೆ ಯಾವ ಬದಲಾಣೆ ಮಾಡದೇ ಅವರದೇ ಆದ ಧಾಟಿಯಲ್ಲಿ ಹೇಳುವುದನ್ನು ಈ ಮುದ್ರಣ ಮಾಧ್ಯಮದಲ್ಲಿ ಕಾಣುತ್ತೇವೆ. ಇದರಿಂದ ಅವರ ಭಾಷಾ ಶೈಲಿಯ ಜೊತೆಗೆ ಅವರ ವಿಚಾರಕ್ಕೆ ಹೆಚ್ಚಿ ಒತ್ತನ್ನು ಕೊಟ್ಟು ಮುದ್ರಿಸಿರುವುದನ್ನು ಹಲವಾರು ಪುಸ್ತಕ, ಪತ್ರಿಕೆಗಳಲ್ಲಿ ಕಾಣುತ್ತೇವೆ. ದೇವನೂರು ಮಹಾದೇವರ ಒಡಲಾಟ, ಕುಸುಮಬಾಲೆ ಕೃತಿಗಳು, ಅವರದೇ ಆದ ಭಾಷೆಯ ಧಾಟಿಯಲ್ಲಿ ಯಥಾವತ್ತಾಗಿ ಮುದ್ರಣಗೊಂಡಿರುವುದನ್ನು ನಾವು ಗಮನಿಸಬಹುದಾಗಿದೆ. "ಮುದ್ರಣ ಮಾಧ್ಯಮದಲ್ಲಿ ನಾವು ಭಾಷೆಯನ್ನು ಬಳಸುವಾಗ ವಿಷಯಾಧಾರಿತವಾಗಲಿ, ವ್ಯಾಕರಣಾತ್ಮಕವಾಗಲಿ ತುಂಬಾ ಜಾಗರೂಕತೆಯಿಂದ ಉಪಯೋಗಿಸುವುದು ತುಂಬಾ ಅವಶ್ಯಕ. ಯಾಕೆಂದರೆ ಮುದ್ರಣದಲ್ಲಿ ಬಳಸಿದ ಭಾಷೆಯು ಸಂದರ್ಭಾನುಸಾರವಾಗಿ ಸದೃಢ ಪುರಾವೆ ಹಾಗೂ ಮಹತ್ವದ ದಾಖಲೆ ಎನಿಸಿಕೊಳ್ಳುವುದರಿಂದ ಹಲವು ವಿವಾದಕ್ಕೆ ಎಡೆ ಮಾಡಿಕೊಡುವ ಸಾಧ್ಯತೆಗಳಿರುತ್ತವೆ.5

"The practice of women writing inscriptions in memory of heroes who died in battle dates back to ancient times. Donations are innumerable. Historians and sociologists use these written inscriptions as sources in their studies. Linguists observe the lessons of inscriptions in the study of language forms of different periods. In such a case, this language in printed form acquires permanence and significance.4 Printing When language is to be used in media, certain steps have to be followed.

**Use of thematic language**

We need a perfect knowledge of the subject on which we have to speak. There we have to use language that is relevant to the subject. It is very important to promote our style and content in a way that is understandable to them and clearly appeals to them as per the print media, based on qualifications and when talking about the common people of the society. We also find a difference in the style of speaking with the illiterate and the language style of dealing with the literate. Our main target is the language used in print media. Must be fit for purpose. The purpose will be successful only when the language is used according to the respective ethnic regional, educational scope, geographical area.

The language should be representative of the article, not the author. Auto: To the extent that it feels like he is saying it himself, it can be said that it should have the effect of reflecting its own importance by combining its activity, meaning, clarity of words and the sentence structure skill of the words, which leads to giving more rigidity to the language in print media. A significant aspect of this print media is the use of language that is relevant to the topic at hand. Eg: When talking about folklore, use vernacular style of language. Apart from that, our language needs to be propagated in its form at some point in order to achieve the goal.

We find in this print media that a great person's statement, interpretation, legislative speech is said in his own vein without any change, just like what the respective politician, person's language style said. Due to this, we see that his language style and his ideas are printed with more emphasis in many books and newspapers.We can observe that Devanur Mahadeva's Odalata, Kusumbale's works, are duly printed in the vein of his own language. "When we use language in the print media, it is very important to be very careful, both thematically and grammatically, because the language used in print is considered to be a strong evidence and important document depending on the situation, and there are possibilities of creating many disputes.5

ಹೀಗಾಗಿ ಇಲ್ಲಿ ಸೂಕ್ಷ್ಮಗ್ರಹಿಕೆ, ಜಾಗರೂಕತೆ ಇರಲೇಬೇಕಾಗುತ್ತದೆ.5 ಉದಾ: ಭಾರತ ಸಂವಿಧಾನ, ಪ್ರಸ್ತುತ ಸಂದರ್ಭದ ವೈಯಕ್ತಿಕ ಹೇಳಿಕೆಗಳು, ಒಂದು ಪಕ್ಷದವರು ಇನ್ನೊಂದು ಪಕ್ಷದವರನ್ನು ಟೀಕಿಸುವುದು, ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ನೀಡಿದ ಗೌರವ ವ್ಯಕ್ತವಾಗುತ್ತದೆ. ಮುದ್ರಣ ಮಾಧ್ಯಮದಲ್ಲಿ ಬಳಸುವ ಭಾಷೆಯ ಪದಗಳು ಹೇಳುವ ವಿಷಯದ ಗಾತ್ರವನ್ನು ಕಡಿಮೆ ಮಾಡಿ ವಿಶಾಲಾರ್ಥವನ್ನು ಹೊಂದಿರುತ್ತವೆ. ಉದಾ: ವಿಶ್ವಾವಿದ್ಯಾಲಯ, ನವರಸ, ನಾಟ್ಯ, ಹಣ್ಣು-ಹಂಪಲು, ತರಕಾರಿ, ತೀರ್ಥಯಾತ್ರೆ. ಈ ಮಾಧ್ಯಮದಲ್ಲಿ ಬಳಸುವ ಭಾಷೆಯ ಬಳಕೆಯೂ ಸಣ್ಣ ಶಬ್ದವನ್ನು ಹೇಳುತ್ತ ವಿಸ್ತಾರವಾದ ಅರ್ಥವಂತಿಕೆ ಪಡೆದಿರುತ್ತದೆ. ಇಲ್ಲಿ ಶ್ರಮವನ್ನು, ಸಮಯವನ್ನು ಕಡಿಮೆ ಮಾಡಿಕೊಡುವಲ್ಲಿ ಭಾಷಾಜೋಡಣೆಯ ಶಬ್ದಗಳು ಮಹತ್ತರ ಪಾತ್ರವಹಿಸುತ್ತವೆ.

**ಮುದ್ರಣ ಮಾಧ್ಯಮದಲ್ಲಿ ಭಾಷಾ ಬಳಕೆಯಲ್ಲಿ ಬಂದೊದಗುವ ಸವಾಲುಗಳು:**

ಪ್ರಸ್ತುತ ಬದಲಾಗುತ್ತಿರುವ ಜನಜೀವನದ ಸನ್ನಿವೇಶಕ್ಕನುಗುಣವಾಗಿ ಮುದ್ರಣ ಮಾಧ್ಯಮದಲ್ಲಿ ಭಾಷೆ ಬಳಕೆಯಾಗಬೇಕಾಗುತ್ತದೆ. ಜಾಗತೀಕರಣದ ಪರಿಣಾಮವಾಗಿ ಇಡೀ ಪ್ರಪಂಚವು ಒಂದು ಹಳ್ಳಿಯಾದಂತಾಗಿದೆ. ಇಂಥ ಸಂದರ್ಭದಲ್ಲಿ ಭಾಷೆ ಸರ್ವವ್ಯಾಪಕತೆಯನ್ನು ಪ್ರದರ್ಶಿಸಬೇಕಾಗಿದೆ. ಕಾರಣ ಭಾಷೆಯು ಹಂತ ಹಂತವಾಗಿ ತನ್ನ ರೂಪವನ್ನು ಬದಲಾಯಿಸಿಕೊಳ್ಳುತ್ತಾ ಬಂದಿದೆ. ಅಂತೆಯೇ ಆ ಭಾಷೆ ಪರಿವರ್ತನಾ ಶೀಲವಾದುದಾಗಿದೆ.

ಉದಾ: ಕನ್ನಡ ಮತ್ತು ಇಂಗ್ಲಿಷಿನ ಅವಶ್ಯಕ ಪದಬಳಕೆ

Book–ಪುಸ್ತಕ  Meals–ಊಟ

Run–ಓಡು  Read–ಓದು

Come –ಬಾ  Write –ಬರೆ

ಇಲ್ಲಿ ವ್ಯಕ್ತವಾಗುತ್ತಿರುವುದು ಅಕ್ಷರಗಳ ರೂಪ ಬದಲಾವಣೆ ಮಾತ್ರ. ಆದರೆ ಅರ್ಥ ಮಾತ್ರ ಒಂದೇ ತೆರನಾಗಿರುತ್ತದೆ. ಒಂದು ಮತ್ತೊಂದು ಭಾಷೆಯ ಮೇಲೆ ಸವಾರಿ ಮಾಡುವುದನ್ನು ನಾವು ವಾಸ್ತವದಲ್ಲಿ ಕಾಣುತ್ತೇವೆ. ಈ ಕ್ರಮವನ್ನು ತಪ್ಪಿಸಬೇಕಾದರೆ ಹಾಗೂ ಒಂದು ಭಾಷೆಯ ಪರಿಣಾಮಕಾರಿ ಬಳಕೆಯಾಗಬೇಕಾದರೆ ನಿರಂತರ ಭಾಷಾ ಸಂಶೋಧನೆಯ ಅವಶ್ಯಕತೆ ಇದೆ. ಮುದ್ರಣ ಮಾಧ್ಯಮದಲ್ಲಿ ಒಂದೇ ಒಂದು ಭಾಷೆ ಬಳಕೆಯಾಗಬೇಕು. ಅಂದಾಗ ಮಾತ್ರ ಓದುಗ ಸಹೃದಯನಿಗೆ ವಿಷಯದ ಸ್ಪಷ್ಟತೆ ಸಿಗುತ್ತದೆ. ಅದರೆ ಹೀಗೆ ಮಾಡುವುದರಿಂದ ಆ ಭಾಷೆಯು ತನ್ನದೇ ಆದ ಅಸ್ತಿತ್ವವನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತದೆಂದು ಹೇಳಬಹುದು. ವಿದ್ಯುನ್ಮಾನ ಯಂತ್ರಗಳು, ಅಂತರ್ಜಾಲ, ಟೇಪರಿಕಾರ್ಡರ್ ಉಪಗ್ರಹ ಸೇವೆಗಳ ಮೂಲಕ ಇಂದು ಭಾಷೆ ಬಳಕೆಯಾಗುತ್ತಿರುವುದರಿಂದ ಮುದ್ರಣ ಮಾಧ್ಯಮಕ್ಕೆ ಇವು ತಮ್ಮದೇ ಆದ ಸವಾಲುಗಳನ್ನು ತಂದೊಡ್ಡಿವೆ. ಈ ತಾಂತ್ರಿಕತೆಯಿಂದ ಮುದ್ರಣ ಪ್ರತಿ ತೆಗೆದುಕೊಳ್ಳದೆಯೇ ಅಲ್ಲಿಯೇ ಸಂಗ್ರಹಿಸಿ, ಬೇಕಾದಾಗ ಬಳಸಿಕೊಳ್ಳುವ ಪರಿಪಾಠವನ್ನು ನಾವು ಇಂದು ಕಾಣುತ್ತೇವೆ.

ಒಬ್ಬ ವ್ಯಕ್ತಿ ನಾಗರೀಕನೆನಿಸಿಕೊಳ್ಳಬೇಕಾದರೆ ಓದು-ಬರಹಗಳನ್ನು ತಿಳಿದಿರಬೇಕಾಗುತ್ತದೆ. ಓದು-ಬರಹಗಳನ್ನು ತಿಳಿಯದಿರುವ ವ್ಯಕ್ತಿ ಹಿಂದುಳಿಯಬೇಕಾಗುತ್ತದೆ. ಓದು-ಬರಹ ಗೊತ್ತಿಲ್ಲದ ವ್ಯಕ್ತಿಗೆ ಸಮಾಜದಲ್ಲಿ ಅಷ್ಟೊಂದು ಸ್ಥಾನಮಾನ ದೊರೆಯಲಾರವು. ಹೀಗಾಗಿ, ಓದು ಬರಹಗಳು ನಮ್ಮ ವಿದ್ಯಾಭ್ಯಾಸ ಪದ್ಧತಿಯ ಮೂಲಭೂತ ಅಂಗಗಳಾಗಿವೆ. ಈ ಕಾರಣದಿಂದ ಮನುಷ್ಯನ ನಾಗರೀಕತೆಯ ಇತಿಹಾಸದಲ್ಲಿ ಬರಹಕ್ಕೆ ಹಾಗೂ ಮುದ್ರಣಕ್ಕೆ ಪ್ರಮುಖವಾದ ಸ್ಥಾನವಿದೆ. ವಾಸ್ತವವಾಗಿ ಬರಹವು ಬಹು ಈಚೀನದು. ಮನುಷ್ಯನು ಭಾಷೆಯ ಉಪಯೋಗವನ್ನು ಕಂಡುಕೊಂಡಾಗ ಎಷ್ಟೋ ಸಹಸ್ರ ವರ್ಷಗಳ ಬಳಿಕ ಬರಹದ ಉಪಯೋಗವನ್ನು ಕಂಡುಕೊಂಡ, ಹೀಗೆ ಭಾಷೆ ಮೊದಲು, ಬರಹ ಆಮೇಲೆ, ತದನಂತರದಲ್ಲಿ ಮುದ್ರಣಕ್ಕೆ ಆಯಾ ಭಾಷೆಗಳ ಬಳಕೆ, ಪತ್ರಿಕೆ, ಪುಸ್ತಕಗಳ ಮೂಲಕ ಹಂತ-ಹಂತವಾಗಿ ಪ್ರಚಾರಕ್ಕೆ ಬಂದು ಹಲವಾರು ಮಾರ್ಪಾಟು ಹೊಂದುತ್ತಾ ಬಳಕೆಯಾಗುತ್ತಿರುವದು ನಮಗೆ ಕಂಡು ಬರುತ್ತದೆ.

ಈ ಮುದ್ರಣ ಮಾಧ್ಯಮದಲ್ಲಿ ಭಾಷೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಎರಡು ಒಟ್ಟಿಗೆ ಸಾಗುವಂತಹ ಪ್ರಕಿಯೆಗಳಾಗಿವೆ. ಆದರೂ, ಇವೆರಡನ್ನೂ ನಾವು ಪ್ರತ್ಯೇಕಿಸಬೇಕಾಗುತ್ತದೆ. ಭಾಷೆ ಎಂದರೆ, ಮಾತನಾಡುವವನ ಬಾಯಿಂದ ಹೊರಟು, ಕೇಳುವವನ ಶ್ರವಣೇಂದ್ರೀಯಗಳನ್ನು ಮುಟ್ಟಿ ಇವನ ಅಭಿಪ್ರಾಯಗಳನ್ನು ಅವನಿಗೆ ತಿಳಿಸತಕ್ಕ ವಸ್ತು ಬರಹವು ಭಾಷೆಯ ಛಾಯಾನುವರ್ತಿ ಭಾಷೆಯನ್ನು ಹಿಡಿದಿಡುವ ಸಾಧನಗಳಲ್ಲಿ ಒಂದು. ಭಾಷೆಯ ಶೈಲಿಯನ್ನು ಉತ್ತಮಗೊಳಿಸಲು ಬರಹವು ಸಹಾಯ ಮಾಡುತ್ತದೆ. ಶಿಲ್ಪಿಯು ಶಿಲ್ಪವನ್ನು ತನ್ನ ಮುಂದಿಟ್ಟುಕೊಂಡು ತಿದ್ದಿ ಉತ್ತಮಪಡಿಸುವಂತೆ, ಕೃತಿಕಾರ ಬರಹದ ಸಹಾಯದಿಂದ ವಾಕ್ಯಗಳನ್ನು ತನ್ನಿಂದ ಬೇರ್ಪಡಿಸಿ ಅವುಗಳನ್ನು ತನ್ನ ಮುಂದಿಟ್ಟುಕೊಂಡು ಅವುಗಳನ್ನು ತಿದ್ದಬಹುದು. ಅನೇಕ ರೀತಿಯ ರಚನೆಯನ್ನು ಕಟ್ಟಿ ನೋಡಬಹುದು. ಆದರೆ, ಈ ಸೌಲಭ್ಯ ಬಾಯಲ್ಲಿ ಮಾತ್ರ. ಉಳಿದಿರುವ ಕೃತಿಗಳಿಗಿರುವುದಿಲ್ಲ.

So there must be sensitivity and caution here.5.Eg: Constitution of India, personal statements of the current situation, one party criticizing another party, respect given by one person to another person is expressed. Language words used in print media reduce the size of the content and have a broader meaning. Eg: Encyclopaedia, Navarasa, Natya, Fruit-Hampalu, Vegetable, Pilgrimage. The use of language used in this medium also has a wide meaning by saying small words. Here syntactic words play an important role in reducing the effort and time.

**Challenges in using language in print media**

Language needs to be used in print media according to the current changing situation of people's life. As a result of globalization the whole world has become a village. In such a context, language needs to demonstrate universality. Because language has been changing its form step by step. Similarly, the language is transformative.

Eg: Essential Vocabulary of English and Kannada

Book–ಪುಸ್ತಕ  Meals–ಊಟ

Run–ಓಡು  Read–ಓದು

Come –ಬಾ  Write –ಬರೆ

What is expressed here is only a change in the form of letters. But only the meaning is the same. In reality we see one language riding on another. If this process is to be avoided and a language is to be used effectively, there is a need for continuous linguistic research. Only one language should be used in print media. Only then will the reader get the clarity of the content. But in doing so it can be said that the language tries to acquire its own existence. Today's use of language through electronic machines, the Internet, tape recorders and satellite services has brought its own set of challenges to print media. Today we see the practice of storing this technique without taking a hard copy and using it when needed.

A person needs to know how to read and write if he wants to be considered a citizen. An illiterate person will be left behind. A person who does not know how to read and write cannot get much status in the society. Thus, reading and writing are fundamental parts of our educational system. For this reason, writing and printing have an important place in the history of human civilization. Actually writing is very easy. When man discovered the use of language, after many thousands of years he discovered the use of writing, thus language first, then writing, and then the use of respective languages for printing, newspaper, books came to be propagated step by step and we find that it is being used with many changes.

In this print medium, language is like two sides of the same coin, two processes that go hand in hand. However, we have to distinguish the two. Language is one of the tools that hold language as a reflection of language. Writing helps to improve language style. Just as a sculptor corrects a sculpture in front of him and refines it, so a writer can separate sentences from himself with the help of writing and correct them in front of him. Many types of structures can be built. However, this facility is not available only for oral works.

ಭಾಷೆ ಎನ್ನುವುದು ಒಂದು ಕ್ಷಣದಲ್ಲಿ ಇಬ್ಬರ ಅಥವಾ ಕೆಲವರ ಮಧ್ಯೆ ನಡೆಯುವ ಕಾರ್ಯ. ಆಗಲೇ ಸೃಷ್ಟಿಯಾಗಿ ಅಲ್ಲಿಗೆ ಅದು ಮುಕ್ತಾಯವಾಗುತ್ತದೆ. ಅದು ಕಾಲ–ದೇಶಗಳಿಗೆ ಬದ್ಧವಾಗಿರುತ್ತದೆ. ನಾವು ಇನ್ನೊಬ್ಬರಿಗೆ ಏನೇ ಹೇಳಿದರೂ, ಅದು ಅವನಿಗೆ ಅರ್ಥವಾಗುತ್ತದೆ. ಅಲ್ಲಿಗೆ ಭಾಷೆಯ ಕೆಲಸ ಮುಗಿಯಿತು. ನಮ್ಮಿಂದ ಭೌಗೋಳಿಕವಾಗಿ ದೂರವಾಗಿರುವವರಿಗೆ ನಮ್ಮ ಅಭಿಪ್ರಾಯಗಳನ್ನು ಮುಟ್ಟಿಸಬೇಕಾದರೆ, ತಾಂತ್ರಿಕತೆಯ ಸಹಾಯದಿಂದ ಮುದ್ರಣ ಮಾಧ್ಯಮವು ಈ ಕಾರ್ಯವನ್ನು ಮಾಡಬಲ್ಲದು. ಇದರಿಂದಾಗಿ ಭಾಷೆಯು ಕಾಲ, ದೇಶಗಳನ್ನು ಮೀರಿ ನಿಲ್ಲಲು ಸಾಧ್ಯವಾಗಿದೆ. ನಾವು ನಮ್ಮ ಅಭಿಪ್ರಾಯಗಳನ್ನು ಭೌಗೋಳಿಕವಾಗಿ ಮಾತ್ರವಲ್ಲದೆ ಕಾಲದ ದೃಷ್ಟಿಯಿಂದಲೂ ದೂರದಲ್ಲಿರುವವರಿಗೆ ಖಚಿತವಾಗಿ ತಿಳಿಸಲು ಸಾಧ್ಯವಾಗಿದೆ. ಈ ಮುದ್ರಣ ಮಾಧ್ಯಮದಲ್ಲಿ ಭಾಷೆ ಹಾಗೂ ಬರಹಗಳು ಇಲ್ಲದೇ ಹೋಗಿದ್ದರೆ ನಮ್ಮ ಸ್ಥಿತಿ ಏನಾಗಿರುತ್ತಿತ್ತು? ಎಂಬುದನ್ನು ಒಂದು ಕ್ಷಣ ಕಲ್ಪಿಸಿಕೊಂಡರೆ ಸಾಕು, ಮನುಷ್ಯನ ಇತಿಹಾಸದಲ್ಲಿ ಇವುಗಳ ಪಾತ್ರ ವೇದ್ಯವಾಗುತ್ತದೆ.

"ಗೆಲ್ಪಿ ಎಂಬ ವಿದ್ವಾಂಸ ಹೇಳುವಂತೆ ನಮ್ಮ ನಾಗರಿಕತೆ ಹಣವಿಲ್ಲದೆ, ಲೋಹಗಳಿಲ್ಲದೆ, ರೇಡಿಯೋ ಮತ್ತು ವಿದ್ಯುತ್‌ಗಳಿಲ್ಲದೆ ಇರಬಲ್ಲದು; ಆದರೆ, ಬರಹವಿಲ್ಲದೆ ನಾಗರಿಕತೆ ಬದುಕಲಾರದು ಎಂಬ ಅಂಶವನ್ನು ನಾವು ಈ ಮುದ್ರಣ ಮಾಧ್ಯಮದಲ್ಲಿ ಭಾಷೆಯ ಬಳಕೆಯಿಂದ ಅರಿಯಬಹುದಾಗಿದೆ.6 ದೇಶ ಕಾಲಗಳು ಬದಲಾದಂತೆ ಬರವಣಿಗೆಯಲ್ಲಿ, ಮುದ್ರಣ ಮಾಧ್ಯಮದಲ್ಲಿ ಬಳಸಲ್ಪಡುವ ಭಾಷೆ ಪರಿವರ್ತನಗೊಂಡಿದೆ. ಯಂತ್ರಗಳ ಅವಿಷ್ಕಾರದಿಂದ ಹಲವು ಮೂಲಭೂತ ಪರಿಕಲ್ಪನೆಗಳು ಪಲ್ಲಟಗೊಂಡಿವೆ. ಹೀಗೆ ನಾಗರಿಕತೆಯ ಬೆಳವಣಿಗೆಯಿಂದಾಗಿ ಒಂದು ತೆರನಾದ ಶಿಸ್ತನ್ನು ಈ ಮುದ್ರಣ ಮಾಧ್ಯಮದ ಭಾಷೆ ಒಳಗೊಂಡಿರುತ್ತದೆ. ಮುದ್ರಣ ಮಾಧ್ಯಮದಲ್ಲಿ ಹೊಸ–ಹೊಸ ಪ್ರಯೋಗಗಳನ್ನು ಮಾಡಿದರೆ ಮಾತ್ರ ಆ ಮಾಧ್ಯಮವನ್ನು ಇನ್ನೂ ಹೆಚ್ಚು ಸದೃಢವಾಗಿ ಬೆಳೆಸಲು ಪ್ರಯೋಗಶೀಲತೆ ಅವಶ್ಯ.

ಮುದ್ರಣ ಮಾಧ್ಯಮದಲ್ಲಿ ಪುಸ್ತಕ ಪತ್ರಿಕೆಗಳು ಹಿಂದಿನಿಂದಲೂ ಒಂದೇ ರೀತಿಯ ಪ್ರಯೋಗಕ್ಕೆ ಅಂಟಿಕೊಂಡಿವೆ. ಇದರಿಂದ ಓದುಗರಿಗೆ ಹೊಸದನ್ನು ಕೊಡಲು ಸಾಧ್ಯವಾಗುತ್ತಿಲ್ಲ ಈ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ಕೇವಲ ಕಥೆ, ಕಾದಂಬರಿ, ಸುದ್ದಿಯನ್ನಷ್ಟೇ ನೀಡದೆ ಇತರ ಆಸಕ್ತಿದಾಯಕ ವಿಷಯಗಳನ್ನು ಓದುಗರಿಗೆ ನೀಡುವುದು ಮುದ್ರಣ ಮಾಧ್ಯಮದ ಕೆಲಸವಾಗಬೇಕು. ಸುದ್ದಿಗಿಂತ ವಿಶಾಲವಾದದ್ದು ನೀಡಲು ಈ ಮಾಧ್ಯಮ ಹೊಸ ಹೊಸ ಯೋಜನೆಗಳನ್ನು ಬೆಳೆಸಿಕೊಳ್ಳಬೇಕಾಗಿದೆ. ಆಸಕ್ತಿದಾಯಕ ವಿಷಯ ಅಳವಡಿಸಿಕೊಂಡರೆ ಮಾತ್ರ ನಿರಂತರ ಬೆಳವಣಿಗೆ ಸಾಧ್ಯ. ಪ್ರಸ್ತುತ ಮುದ್ರಣ ಮಾಧ್ಯಮ ಕ್ಷೇತ್ರದಲ್ಲಿ ಪ್ರತಿಭಾವಂತ ಬರಹಗಾರರಿಗೆ ತುಂಬಾ ಅವಕಾಶಗಳಿವೆ. ಅವರು ಬರವಣಿಗೆಯಲ್ಲಿ ಭಾಷೆಯನ್ನು ಪ್ರಯೋಗಿಸುವಲ್ಲಿ ನೂತನವಾದ ಪ್ರಯೋಗಗಳನ್ನು ಮಾಡಬೇಕಾದ ಅಗತ್ಯವಿದೆ ಎಂಬುದನ್ನು ಹೇಳಬಹುದು. ವಿಶ್ವವಿದ್ಯಾಲಯದ ನಾಲ್ಕು ಗೋಡೆಗಳ ಮಧ್ಯದಲ್ಲಿ ನಡೆಸುವ ಅಧ್ಯಯನಕ್ಕಿಂತ ಪ್ರಯೋಗಿಕವಾದ ಅಧ್ಯಯನವು ವಿದ್ವಾಂಸರುಗಳಿಗೆ, ವಿದ್ಯಾರ್ಥಿಗಳಿಗೆ ಜ್ಞಾನದೊಂದಿಗೆ ಕ್ರಿಯಾಶೀಲತೆಯನ್ನು ತಂದು ಕೊಡುತ್ತದೆ. ವಿಭಾಗಗಳು ತಮ್ಮ ಶೈಕ್ಷಣಿಕ ವರ್ಷದಲ್ಲಿ ನಡೆಸುವ ಶಿಬಿರಗಳು, ಕಾರ್ಯಾಗಾರಗಳು ಹಾಗೂ ವಿಶೇಷ ಉಪನ್ಯಾಸಗಳು ವಿದ್ಯಾರ್ಥಿಗಳಿಗೆ ವಿಷಯದ ಬಗ್ಗೆ ವಿಶೇಷ ಜ್ಞಾನವನ್ನು ಒದಗಿಸುತ್ತವೆ.

**3. ಸಮಾರೋಪ**

ಈ ನಿಟ್ಟಿನಲ್ಲಿ ಭಾಷೆಯ ಬಗೆಗಿನ ಸಾಮಾನ್ಯವಾದ ವಿಷಯಗಳು, ಅದರ ಗ್ರಹಿಕೆಯ ಯಾವ ಸಂದರ್ಭದಲ್ಲಿ ಯಾವ ರೀತಿ ಬದಲಾಗುತ್ತಾ ಅವು ಬಳಕೆಯ ರೂಪವನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಇಲ್ಲಿ ಗಮನಿಸಿದಾಗ ಮುದ್ರಣ ಮಾಧ್ಯಮದ ಭಾಷಾ ಬಳಕೆ ಎಷ್ಟು ಚುರುಕಾಗಿದೆ, ಭಿನ್ನವಾಗಿ ಎಲ್ಲ ಪ್ರಾದೇಶಿಕತೆ ಮೀರಿ ಸಾರ್ವತ್ರಿಕವಾಗಿ ಎಲ್ಲರಿಗೂ ತಿಳಿಯುವ ಭಾಷೆಯ ರೂಪ ಹೇಗೆ ಪಡೆದುಕೊಂಡು ಬಳಕೆಯಾಗುತ್ತದೆ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ.

**ಪರಾಮರ್ಶನ ಗ್ರಂಥಗಳು:**

೧. ಭಾಷಾ ವಿಜ್ಞಾನದ ಮೂಲತತ್ವಗಳು – ಡಾ. ಎಂ. ಚಿದಾನಂದಮೂರ್ತಿ, ಡಿವಿಕೆಮೂರ್ತಿ ಪ್ರಕಾಶಕರು, ಮೈಸೂರು, 1993

೨. ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡ ಅಭಿವೃದ್ಧಿ – ಡಾ. ಟಿ. ಸಿ. ಪೂರ್ಣಿಮಾ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2003

೩. ಭಾಷಾಲೇಖ – ಡಾ. ಸಂಗಮೇಶ ಸವದತ್ತಿಮಠ ರೂಪರಶ್ಮಿ ಪ್ರಕಾಶನ, ಗುಲಬರ್ಗಾ,1999

Language is an act between two or a few people in a moment. Once created, it ends there. It is time-bound. Whatever we say to another, he understands. There the language work is over. If we need to reach our views to those who are geographically distant from us, print media can do this with the help of technology. Because of this, the language has been able to stand beyond time and countries.
We are able to communicate our views with certainty to those who are distant not only geographically but also temporally. What would be our condition if language and writings in this print media were gone? It is enough to imagine for a moment, the role of these in the history of man.

"Scientist Gelpi says that our civilization can survive without money, metals, radio and electricity; however, we can understand the fact that civilization cannot survive without writing from the use of language in this print media. 6 As the times of the country change, the language used in writing and print media has changed. Many basic concepts have been displaced by the invention of machines. Thus, the language of print media is a discipline that has evolved due to the development of civilization.

In the print media, books and magazines have stuck to the same experiment as in the past. Due to this, it is not possible to give something new to the readers, so efforts should be made in this regard. The job of print media should be to provide readers with other interesting things, not just stories, novels, news. This media needs to develop new projects to offer something broader than news. Continuous growth is possible only if interesting content is adopted. Currently there are so many opportunities for talented writers in the field of print media. They may say that new experiments are needed in using language in writing. Rather than studying within the four walls of a university, practical study brings knowledge and activity to scholars and students. Camps, workshops and special lectures conducted by the departments during their academic year provide students with specialized knowledge on the subject.

**3. Conclusion**

In this regard, when we observe how the common things about language change in the context of its perception and how they take the form of use, how fast the language use of the print media is, we can clearly see here how it takes the form of a language universally known to everyone beyond all regionalism and is used.

**Reference Books**

1. Principles of Linguistics – Dr. M. Chidanandamurthy, Ch. DVK Murthy Publishers, Mysore, 1993
2. Modern Communication Media and Kannada Development - Dr. T. C. Purnima
Ch. Broadcasting, Kannada University, Hampi 2003
3. Language article - Dr. Sangamesha Savadatti Math Ch. Ruparashmi Prakashan, Gulbarga, 1999
4. Kannada University Encyclopedia-K. V. Narayana (Ed.)
5. Ch. Prasaraga, Kannada University, Hampi 2000

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2000

೪. ನಲ್ನುಡಿಗನ್ನಡ – ಡಿ. ಪದ್ಮನಾಭಶರ್ಮ
ಪದ್ಮಾಂಬ ಪ್ರಕಾಶನ, ಬೆಂಗಳೂರು, ಪುಟ 5,6

೫. ಆಧುನಿಕ ಮುದ್ರಣ ಕಲೆ ಮತ್ತು ಪುಸ್ತಕನಿರ್ಮಾಣ –

೬. ಪೋ. ಎಮ್. ಎಚ್. ಹರಿದಾಸ

೭. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–ಕೆ. ವಿ. ನಾರಾಯಣ(ಸಂ)

6. Nalnudigannada - d. Padmanabhasharma
   Ch. Padmamba Publications, Bangalore, pp. 5,6
7. Modern Printing and Bookmaking –
   Poe. M. H. Haridasa